**ಸಾಕ್ಷಿಯನ್ನು ದಿನಾಂಕ: 11.11.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ VGB ವಕೀಲರಿಂದಃ**

ನಾನು 9 ನೇ ತರಗತಿಯವರೆಗೆ ಶಾಲೆಗೆ ಹೋಗಿರುತ್ತೇನೆ. ಈ ದಾವೆಯನ್ನು ನಮ್ಮ ತಾಯಿ ಹೂಡಿರುತ್ತಾರೆ ಎಂದರೆ ನಿಜ. ನನ್ನ ತಾಯಿಗೆ ವಯಸ್ಸಾದ ಕಾರಣ ನನ್ನ ತಾಯಿಯಿಂದ ಅಧಿಕಾರ ಪತ್ರ ಪಡೆದುಕೊಂಡು ಈ ದಾವೆಯಲ್ಲಿ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ನಿಜ.

ದಾವಾ ಆಸ್ತಿ ನಂ. ಎ21/226. ಸದರಿ ದಾವಾ ಆಸ್ತಿಯ ಅಳತೆಯನ್ನು ಮಾಡಿಸಿ ದಾವೆಯಲ್ಲಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಖುಲ್ಲಾ ಜಾಗ ಇದೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಮೀನಾಕ್ಷಿ ಬರಗಾವಿ ಇವರ ಮನೆ ಹಾಗೂ ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸದರಿ ಚಕಬಂದಿಯನ್ನು ವಾದ ಪತ್ರದಲ್ಲಿ ಬರೆಯಿಸಿರುತ್ತೇನೆ. ವಾದ ಪತ್ರದಲ್ಲಿರುವ ಚಕಬಂದಿಗೂ ಹಾಗೂ ನಾನು ಈಗ ಹೇಳಿದ ಚಕಬಂದಿಗೂ ವ್ಯತ್ಯಾಸ ಇರುವುದರಿಂದ ವಾದ ಪತ್ರದಲ್ಲಿ ಹಾಗೂ ನಾನು ಹೇಳಿದ ಚಕಬಂದಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಉತ್ತರಕ್ಕೆ ಚಂದರಗಿರಿ, ಕಾಶವ್ವ ಹುಣಶಿಮರದ, ರುದ್ರಪ್ಪ ಹಿತ್ತಲಮನಿ ಹಾಗೂ ಬಸಪ್ಪ ಬರಗಾವಿ ಇವರ ಆಸ್ತಿಗಳು ಇರುತ್ತವೆ ಎಂದು ಬರೆಯಿಸಿರುತ್ತೇನೆ ಎಂದರೆ ನಿಜ. ಸದರಿಯವರ ಹೆಸರುಗಳ ಪೈಕಿ ಬಸಪ್ಪ ಬರಗಾವಿ ಇವರನ್ನು ಹೊರತು ಪಡಿಸಿ ಉಳಿದವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ

ಸಾಕ್ಷಿಯು ಪ್ರತಿವಾದಿಯನ್ನು ಹೊರತು ಪಡಿಸಿ ಬೇರೆ ಯಾರು ನಮ್ಮ ಜೊತೆ ತಂಟೆ ತೆಗೆದಿರುವುದಿಲ್ಲ ಎಂದು ಹೇಳುತ್ತಾರೆ. ವಾದ ಪತ್ರದ ಜೊತೆಗೆ ದಾವಾ ಆಸ್ತಿಯ ಹಾತನಕಾಶೆಯನ್ನು ಸಲ್ಲಿಸಿರುವುದಿಲ್ಲ. ನಮ್ಮ ಆಸ್ತಿಯು ಎಲ್ಲಿ  ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಆದ್ದರಿಂದ ಹಾತನಕಾಶೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಉತಾರವನ್ನು ನೋಡಿದರೆ ಎಲ್ಲಿ ಇರುತ್ತದೆ ಎಂದು ಗೊತ್ತಾಗುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯು ಎಲ್ಲಿ ಇರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯ ಆಸ್ತಿ ನಂ. 227 ಮತ್ತು 228 ಇರುತ್ತದೆ. ಹೀಗೆ ಪ್ರತಿವಾದಿಯ ಆಸ್ತಿ ನಂಬರ ಇರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ಅಥವಾ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಯಿಸಿರುವುದಿಲ್ಲ ಆದ್ದರಿಂದ ನಾನು ಈಗ ಸುಳ್ಳು ಆಸ್ತಿ ನಂಬರ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ದಾವಾ ಆಸ್ತಿಯ ನಂ. ಎ21/226 ರಲ್ಲಿರುವ ಎಲ್ಲಾ ಆಸ್ತಿಯು ನಮ್ಮದೇ ಇರುತ್ತದೆ. ನಿಪಿ 2 ರಂತೆ ಇರುವ ಠರಾವು ಪ್ರಕಾರ ಸದರಿ ಆಸ್ತಿ ನಂ. ಎ21/226 ರಂತೆ ಇರುವ ಆಸ್ತಿಯಲ್ಲಿ ಕೇವಲ ಅರ್ಧ ಭಾಗ ಮಾತ್ರ ನಮ್ಮ ತಾಯಿಯ ಹೆಸರಿಗೆ ಇರುತ್ತದೆ ಎಂದರೆ ನಿಜ.

ದಾವಾ ಆಸ್ತಿಯು ಸಾರ್ವಜನಿಕರ ಆಸ್ತಿಯು ಮುಳುಗಡೆ ಆಗಿರುವ ಜನರಿಗೆ ಸರ್ಕಾರಿಂದ ಮಂಜೂರದ ಜಾಗಗಳಲ್ಲಿ ಇರುತ್ತದೆ ಎಂದರೆ ನಿಜ. ನಮ್ಮ ಮನೆ ಮತ್ತು ಜಮೀನು ಸಹ ಮುಳುಗಡೆ ಆಗಿರುತ್ತದೆ. ಹೀಗೆ ನಮ್ಮ ಆಸ್ತಿಯು ಮುಳುಗಡೆ ಆಗಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು

ಹಾಜರುಪಡಿಸಿರುವುದಿಲ್ಲ. ಆಸ್ತಿ ಮುಳುಗಡೆ ಆದ ಜನನಿರಿಗೆ ಭೂಸ್ವಾದೀನಾಧೀಕಾರಿಗಳು ಮಂಜೂರು ಮಾಡಿದಂತೆ ನಮಗೆ ಯಾವುದೇ ಅಧಿಕಾರಿಗಳು ಆಸ್ತಿಯನ್ನು ಮಂಜೂರು ಮಾಡಿರುವ ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ. ನಿಪಿ 2 ರಲ್ಲಿಯು ಸಹ ನಮ್ಮ ಆಸ್ತಿ ಇಲ್ಲಿಯೇ ಬರುತ್ತದೆ ಎಂದು ಎಲ್ಲಿಯೂ ನಮೂದು ಇರುವುದಿಲ್ಲ ಎಂದರೆ ನಿಜ. ಆದ್ದರಿಂದ ಪಂಚಾಯತಿಯವರು ನಮ್ಮ ತಾಯಿ ನಿರ್ಗತಿಕಳು ಆಗಬಾರದು ಎಂದು ನಮ್ಮ ತಾಯಿಯ ಹೆಸರಿಗೆ ಮಾಡಿ ನಿರ್ಗತಿಕರಿಗೆ ಕೊಡುವ ಆಸ್ತಿ ಅಲ್ಲದೇ ಇದ್ದರೂ ಬೇಕಾಯ್ದೇಶೀರವಾಗಿ ಸುಳ್ಳಾಗಿ ನಿಪಿ 2 ರಂತೆ ಠರಾವು ಪಾಸ ಮಾಡಿರುತ್ತಾರೆ ಎಂದರೆ  ಸರಿಯಲ್ಲ. ನಿಪಿ 2 ರಲ್ಲಿ ಸೂಚಕರಂತೆ ಸಹಿ ಮಾಡಿರುವ ಶ್ರೀ ವಿ. ಸಿ. ತಿಗಡಿ ನಮ್ಮ ಚಿಕ್ಕಪ್ಪ ಆಗಬೇಕು. ಆ ಸಮಯದಲ್ಲಿ ಸದರಿಯವರು ಪಂಚಾಯತ ಸದಸ್ಯರಿದ್ದರು. ಹೀಗೆ ಪಂಚಾಯತಿ ಸದಸ್ಯರಿರುವದರಿಂದ ನಮ್ಮ ತಾಯಿಗೆ ಲಾಭವಾಗಲೀ ಎಂಬ ಉದ್ದೇಶದಿಂದ ಅಧಿಕಾರವನ್ನು ದುರಪಯೋಗಪಡಿಸಿಕೊಂಡು ದಾವಾ ಆಸ್ತಿಯನ್ನು ಬೇಕಾಯ್ದೇಶೀರವಾಗಿ ನಮ್ಮ ತಾಯಿಯ ಹೆಸರಿಗೆ  ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಈಗ ಗುಡಿಸಲನ್ನು ಹಾಕಿರುತ್ತೇವೆ. ದಾವಾ ಆಸ್ತಿಯಲ್ಲಿ ಗುಡಿಸಲು ಇರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಿಃ 09.07.1993 ರಲ್ಲಿ ಭೂಸ್ವಾಧೀನಾಧಿಕಾರಿಗಳು ಮಂಜೂರು ಮಾಡಿದ ಪತ್ರ ಇರುತ್ತದೆ ಎಂದು ವಾದ ಪತ್ರದಲ್ಲಿದ್ದು ಅದು ಪಂಚಾಯತಿಯವರು ಮಂಜೂರು ಮಾಡಿದ ಪತ್ರ ಆಗಿರುತ್ತದೆ ಹೊರತು ಭೂಸ್ವಾ ಧೀನಾಧೀಕಾರಿಗಳು ಯಾವುದೇ ಆಸ್ತಿಯನ್ನು

ನಮ್ಮ ತಾಯಿಯ ಹೆಸರಿಗೆ ಮಂಜೂರು ಮಾಡಿರುವುದಿಲ ಎಂದರೆ ಸಾಕ್ಷಿಯು ಪಂಚಾಯತಿಯವರು ನಮ್ಮ ತಾಯಿಯ ಹೆಸರಿಗೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ನಮ್ಮ ತಾಯಿ ಹೆಸರಿಗೆ ಮಂಜೂರು ಮಾಡಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಂತೆ ಇರುವ ದಾವಾ ಆಸ್ತಿಯ ಉತಾರ 2000-01 ನೇ ಸಾಲಿಗೆ ಸಂಬಂಧಿಸಿದ್ದು ಇರುತ್ತದೆ ಎಂದರೆ ನಿಜ. ನಾವು ಹಾಜರುಪಡಿಸಿದ ಉತಾರದ ಪ್ರಕಾರ ದಾವಾ ಆಸ್ತಿಯ ಖುಲ್ಲಾ ಜಾಗ ಇರುವುದಿಲ್ಲ ಅದರಲ್ಲಿ ದಡ್ಡಿ ಇರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ನಾವು ತೋರಿಸಿದ ದಾವಾ ಆಸ್ತಿಯು ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದು ಪ್ರತಿವಾದಿಗೆ ಭೂಸ್ವಾಧೀನಾಧಿಕಾರಿಗಳು ಮಂಜೂರು ಮಾಡಿದ ಆಸ್ತಿಯ ಕುರಿತು ಇರುವ ದಾಖಲೆ ಎಂದರೆ ಸಾಕ್ಷಿಯು ಸದರಿ ದಾಖಲೆನ್ನು ನೋಡಿ ಒಪ್ಪಿಕೊಂಡು ಕಾರಣ ಅದನ್ನು ಈಗ **ನಿಡಿ 1** ಎಂದು ಗುರುತಿಸಲಾಯಿತು. ಹೀಗೆ **ನಿಡಿ 1** ರ ಪ್ರಕಾರ ಪ್ರತಿವಾದಿಗೆ ಮಂಜೂರದ ಆಸ್ತಿಯಲ್ಲಿ ಪ್ರತಿವಾದಿಯು ಉತ್ತರಕ್ಕೆ ಮುಖ ಮಾಡಿ ಮನೆ ಹಾಕಿರುತ್ತಾನೆ ಎಂದರೆ ನಿಜ. ಪ್ರತಿವಾದಿಯ ಆಸ್ತಿಯ ಪೂರ್ವಕ್ಕೆ ಚಂದರಗಿರಿ ವೀರನಗೌಡ, ಕಾಶವ್ವ ಹುಣಶಿಮರದ ಮತ್ತು ರುದ್ರಪ್ಪ ಹಿತ್ತಲಮನಿ ಇವರು ಸಹ ತಮ್ಮ ತಮ್ಮ ಆಸ್ತಿಗಳಲ್ಲಿ ಮನೆಗಳನ್ನು ಹಾಕಿರುತ್ತಾರೆ ಎಂದರೆ ನಿಜ. ಸದರಿಯವರು ಮನೆಗಳು ಸಹ ಉತ್ತರಕ್ಕೆ ಮುಖ ಮಾಡಿ ಕಟ್ಟಿರುತ್ತಾರೆ ಎಂದರೆ ನಿಜ. ಹೀಗೆ ಸದರಿಯವರು ಮನೆಗಳನ್ನು ಕಟ್ಟಿದ ನಂತರ ಉಳಿದ ಹಿತ್ತಲಗಳು

ಹಿಂದೆ ದಕ್ಷಿಣಕ್ಕೆ ಇರುವ ರಸ್ತೆಯವರೆಗೂ ಅವರದೇ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪಶ್ಚಿಮಕ್ಕೆ ಗುಣಕಲಮಠ ಎಂಬುವವರ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ಪ್ರತಿವಾದಿಯು ನಮ್ಮದೆ ಇರುತ್ತದೆ ಎಂದು ಅಖಂಡವಾಗಿ ಜಾಗವನ್ನು ಹಿಡಿದಿರುತ್ತಾರೆ. ಸದರಿ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಹೀಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಅದು ಪ್ರತಿವಾದಿಯು ತನ್ನ ಮನೆ ಮುಂದೆ ನಿಂತುಕೊಂಡು ತೆಗೆಯಿಸಿದ ಛಾಯಾಚಿತ್ರ ಎಂದರೆ ಸಾಕ್ಷಿಯು ಒಪ್ಪಿ ಕೊಂಡು ಗುರುತಿಸಿದ ಕಾರಣ ಸದರಿ ಛಾಯಾಚಿತ್ರವನ್ನು **ನಿಡಿ 2** ಎಂದು ಗುರುತಿಸಲಾಯಿತು.

ಪ್ರತಿವಾದಿಯ ಮಗಳು ಮೀನಾಕ್ಷಿ ಎಂದು ಇರುತ್ತಾಳೆ ಎಂದರೆ ನಿಜ. ಸಾಕ್ಷಿಗೆ ದಿಃ 09.07.1999 ರಂದು ಆಗಿರುವ ಒಂದು ಠರಾವು ಪ್ರತಿಯನ್ನು ತೋರಿಸಿ ಸದರಿ ಠರಾವು ಪ್ರಕಾರ ಪ್ರತಿವಾದಿಯು ತನ್ನ ಹೆಸರಿಗೆ ಮಂಜೂರದ ಆಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡು ಉಳಿದ ಹಿತ್ತಲ ಕಡೆ ಇರುವ ಜಾಗವನ್ನು ತನ್ನ ಸ್ವಂತ ಮಗಳಾದ ಮೀನಾಕ್ಷಿ ಇವಳಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹೀಗೆ ಠರಾವು ಪಾಸ ಮಾಡಿದ ಪ್ರಕಾರ ಸದರಿ ಆಸ್ತಿಯು ಪ್ರತಿವಾದಿಯ ಮಗಳ ಹೆಸರಿಗೆ ಮಾಡಿ ಪಂಚಾಯತಿಯವರು ಆಸ್ತಿ ನಂ. ಎ21/230/1 ರಂತೆ ಉತಾರವನ್ನು ಸಹ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಆಸ್ತಿ ನಂ. ಎ21/230/1 ರ ಉತಾರವನ್ನು ಪ್ರತಿವಾದಿಯ ಮಗಳಾದ ಮೀನಾಕ್ಷಿ ಇವರ ಹೆಸರಿಗೆ ಕೊಟ್ಟಿರುತ್ತಾರೆ ಎಂದರೆ ನಿಜ. ಅದೇ ರೀತಿ ಸದರಿ ಆಸ್ತಿ ನಂ.

ಎ21/230/1 ಕ್ಕೆ ಸಂಬಂಧಿಸಿದಂತೆ ಪಂಚಾಯತಿಯವರು ಹಾಥ ನಕಾಶೆಯನ್ನು ಸಹ ಕೊಟ್ಟಿರುತ್ತಾರೆ ಎಂದರೆ ನಿಜ. ಅದೇ ರೀತಿ ಸದರಿ ಆಸ್ತಿ ನಂ. ಎ21/230/1 ರಂತೆ ಇರುವ ಆಸ್ತಿಯನ್ನು ಮೀನಾಕ್ಷಿ ಇವರ ಹೆಸರಿಗೆ ಮಾಡಿ ಅದನ್ನು ಸ್ಥಾನಿಕ ಚವಕಾಶಿ ಮಾಡಿ ಸದರಿ ಆಸ್ತಿಗೆ ಚಕಬಂದಿಯನ್ನು ಹಾಕಿಸಿರುತ್ತಾರೆ ಎಂದರೆ ನಿಜ. ಸದರಿ ವಿಷಯವನ್ನು ತೋರಿಸಲು 5 ಛಾಯಾಚಿತ್ರಗಳು ಇರುತ್ತದೆ ಎಂದರೆ ಸಾಕ್ಷಿಯು ಸದರಿ ಛಾಯಾಚಿತ್ರಗಳನ್ನು ನಾವು ಊರಿನಲ್ಲಿ ಇರದೇ ಇರುವಾಗ ಬಂದು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದು ಹೇಳತ್ತಾರೆ. ಸಾಕ್ಷಿಯು ಮುಂದುವರೆದು ಹೀಗೆ ಸ್ಥಳವನ್ನು ಪರೀಶೀಲನೆ ಮಾಡಲು ಬರುತ್ತೇವೆ ಎಂದು ನಮಗೆ ಯಾರು ಹೇಳಿರಲಿಲ್ಲ ಎಂದು ಹೇಳುತ್ತಾರೆ.

ಈ ದಾವೆಯ ಜೊತೆಗೆ ನಾವು ಮನಾಯಿ ಆದೇಶ ಕೋರಿ ಅರ್ಜಿಯನ್ನು ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ಮೊದಲಿಗೆ ಪ್ರತಿವಾದಿಯ ಆಸ್ತಿ ನಂ. ಎ/21/229 ಇದ್ದು ಅದನ್ನು ನಂತರ ನ್ಯಾಯಾಲಯಕ್ಕೆ ತಿದ್ದುಪಡಿ ಅರ್ಜಿ ಸಲ್ಲಿಸಿ ಅದರ ಆದೇಶದ ಮೇರೆಗೆ ಪ್ರತಿವಾದಿಯ ಆಸ್ತಿ ನಂ. ಎ21/230 ಎಂದು ತಿದ್ದುಪಡಿ ಮಾಡಿರುತ್ತೇವೆ ಎಂದರೆ ನಿಜ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಪುನಃ ಪ್ರತಿವಾದಿ ಆಸ್ತಿ ನಂ. ಎ/21/229 ಎಂದು ಇರುತ್ತದೆ ಎಂದು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಈ ದಾವೆಯನ್ನು ದಂಡ ಸಹಿ ವಜಾ ಮಾಡಿ ಕಿತ್ತು ಹಾಕಬೇಕೆಂದು ಕೋರಿಕೆ ಇರುತ್ತದೆ ಎಂದರೆ ಸರಿಯಲ್ಲ. ಹೀಗೆ ಬರೆಯಿಸಿದ್ದರು ಬರೆಯಿಸಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ

ಆಸ್ತಿಯು ನಮ್ಮ ಹೆಸರಿಗೆ ಮಂಜೂರು ಆಗಿರುವುದಿಲ್ಲ, ದಾವಾ ಆಸ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳು ಇರುವುದಿಲ್ಲ ಹಾಗೂ ನಿಪಿ 2 ರಂತೆ ಸುಳ್ಳಾಗಿ ಠರಾವು ಪಾಸ ಮಾಡಿ ದಾವಾ ಆಸ್ತಿ ನಮ್ಮದು ಇರುತ್ತದೆ ಎಂದು ಸುಳ್ಳು ಮಾಹಿತಿ ನೀಡಿ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ದಾವೆಯನ್ನು ಹೂಡಿ ಅದಕ್ಕೆ ಪೂರಕವಾಗಿ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**